# ಅಲ್ಲೊಂದು ಹಕ್ಕಿ ಇಲ್ಲೊಂದು ಮುಗುಳು

## ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಗಮನಸೆಳೆದ ಭಾರತದ ಸಾಧನೆ

ವಿವಿಧ ಪ್ರದೇಶ ಹಾಗೂ ಹಿನ್ನೆಲೆಯಿಂದ ಬಡತನದ ಬೇಗೆಯಲ್ಲಿ ಬೆಂದು ಅರಳಿದ ಭಾರತದ ಕ್ರೀಡಾಪಟುಗಳು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಮೂಲಕ ತಾರೆಯರಾಗಿ ಹೊರಹೊಮ್ಮಿದ್ದಾರೆ. ಹಿಂದಿನ ಎಲ್ಲಾ ಒಲಿಂಪಿಕ್ಸ್‌ಗಿಂತ ಭಾರತ ಈ ಬಾರಿ ಹೆಚ್ಚು ಪದಕಗಳನ್ನು ಗೆದ್ದಿದೆ. ಕೆಲ ಸ್ಪರ್ಧೆಗಳಲ್ಲಿ ಅಚ್ಚರಿಯ ಫಲಿತಾಂಶಗಳನ್ನು ನೀಡಿದೆ. ಪಂದ್ಯದಲ್ಲಿ ಸೋತರೂ ಕೆಲವರು ಕ್ರೀಡಾಪ್ರಿಯರ ಮನಸ್ಸು ಗೆದ್ದಿದ್ದಾರೆ. ವೈಯಕ್ತಿಕ ವಿಭಾಗದಲ್ಲಿ ಪದಕ ಗೆದ್ದ ಭಾರತದ ಎಲ್ಲ ಕ್ರೀಡಾಪಟುಗಳು 25 ವರ್ಷ ವಯಸ್ಸಿನ ಆಸುಪಾಸಿನಲ್ಲಿ ಇರುವವರು. ಇನ್ನಷ್ಟು ಉತ್ತಮ ಸೌಲಭ್ಯಗಳನ್ನು ಕಲ್ಪಿಸಿ, ಪ್ರೋತ್ಸಾಹಿಸಿದರೆ ವಿಶ್ವ ಕ್ರೀಡಾವೇದಿಕೆಯಲ್ಲಿ ಭಾರತ ಹೇಗೆ ಪ್ರಕಾಶಿಸಬಲ್ಲದು ಎನ್ನುವುದಕ್ಕೆ ಈ ಯುವಶಕ್ತಿಯ ಸಾಧನೆಯೇ ಸಾಕ್ಷಿ.

■ ಪ್ರಮೋದ

ಬಾಲ್ಯದಲ್ಲಿ ಸಾಕಷ್ಟು ದೇಹತೂಕ ಹೊಂದಿದ್ದ ತಮ್ಮ ಮಗನಲ್ಲಿ ದೈಹಿಕ ಶಿಸ್ತು ತರಬೇಕು. ದೇಹ ಸಮತೋಲನದಿಂದ ಕೂಡಿರುವಂತೆ ಮಾಡಬೇಕು ಎಂದು ತಂದೆ ಸತೀಶ ಕುಮಾರ್ ಅವರಿಗೆ ಆಸೆ. ಅದಕ್ಕಾಗಿ ಮಗನನ್ನು ಕ್ರೀಡೆಯ ಹಾದಿಗೆ ಕರೆತಂದರು. ಬೊಜ್ಜುತನದಿಂದಾಗಿ ಬಾಲ್ಯದಲ್ಲಿ ಆ ಹುಡುಗ ಸ್ನೇಹಿತರಿಂದ ಪದೇ ಪದೇ ಗೇಲಿಗೆ ಒಳಗಾಗುತ್ತಿದ್ದ. ಹೀಗಾಗಿ ತಂದೆ ಕಟ್ಟು ಬಿದ್ದು ಮಗನಿಗೆ ದೈಹಿಕ ಕಸರತ್ತಿನಲ್ಲಿ ತೊಡಗಿಸಿದರು.

ಕೃಷಿ ಕಾಯಕದಲ್ಲಿ ತೊಡಗಿದ್ದ 17 ಜನರಿದ್ದ ಸತೀಶ ಅವರ ತುಂಬು ಕುಟುಂಬದಲ್ಲಿ ಆ ಹುಡುಗ ಬಾಲ್ಯದಲ್ಲಿ ಹೊಲ–ಗದ್ದೆಗಳಲ್ಲಿ ಕೋಣಗಳ ಬಾಲ ಹಿಡಿದು, ಮರಗಳನ್ನು ಏರಿ ಕೀಟಲೆ ಮಾಡುತ್ತಿದ್ದ. ದೇಹ ತೂಕ ಇಳಿಸಿಕೊಳ್ಳಲು ಕ್ರೀಡೆಯಲ್ಲಿ ಪಾಲ್ಗೊಳ್ಳುವಂತೆ ಅಪ್ಪ ನೀಡಿದ ಸಲಹೆಯನ್ನು ಮೊದಮೊದಲು ಮಗ ಪಾಲಿಸಲಿಲ್ಲ. ಅಪ್ಪನ ಒತ್ತಾಯಕ್ಕೆ ಮಣಿದು ಓಟದಲ್ಲಿ ಪಾಲ್ಗೊಳ್ಳಲು ಒಪ್ಪಿದ.

ಚಿಕ್ಕಪ್ಪನ ಜೊತೆ ಹರಿಯಾಣದ ಪಾಣಿಪತ್‌ನಲ್ಲಿ ಓಟದ ಅಭ್ಯಾಸ ಆರಂಭಿಸಿದ ಆ ಹುಡುಗನಿಗೆ ಜಾವೆಲಿನ್ ಎಸೆತ ಆಕರ್ಷಣೆಯಾಗಿ ಕಂಡಿತು. ಬಳಿಕ ಆ ಕ್ರೀಡೆಯಲ್ಲಿ ತೊಡಗಿಕೊಂಡ. ಹರಿಯಾಣದ ಖಾಂಡ್ರಾ ಗ್ರಾಮದಿಂದ ನಿತ್ಯ ಪಾಣಿಪತ್‌ನಲ್ಲಿ ಮೈದಾನಕ್ಕೆ ಹೋಗಿ ಬರುತ್ತಿದ್ದ. ಓಟದ ಅಭ್ಯಾಸದ ಜೊತೆಗೆ ಜಾವೆಲಿನ್ ಎಸೆಯುವುದನ್ನು ರೂಢಿಸಿಕೊಂಡ. ಯಾವ ತರಬೇತಿಯೂ ಇಲ್ಲದೆ 40 ಮೀಟರ್‌ಗಿಂತಲೂ ಹೆಚ್ಚು ದೂರ ಎಸೆದದ್ದನ್ನು ಗಮನಿಸಿದ ತರಬೇತುದಾರ ಜೈವೀರ್ ಚೌಧರಿ ಜಾವೆಲಿನ್‌ನಲ್ಲಿ ಮುಂದುವರಿಯುವಂತೆ ಸಲಹೆ ನೀಡಿದರು. ಹೀಗೆ ಅನಿರೀಕ್ಷಿತವಾಗಿ ಆರಂಭವಾದ ಕ್ರೀಡಾಲೋಕದ ಪಯಣದಲ್ಲಿ ಮುಂದೊಂದು ದಿನ ತಾನು 'ಗೋಲ್ಡನ್ ಬಾಯ್' ಆಗುತ್ತೇನೆ ಎನ್ನುವ ಕನಸು ಕೂಡ ಆತ ಕಂಡಿರಲಿಲ್ಲ. ಭಾರತ ತನ್ನ ಸಾಧನೆಗೆ ತಲೆಗೂಗುತ್ತದೆ ಎನ್ನುವ ನಿರೀಕ್ಷೆಯೂ ಆತನಿಗಿರಲಿಲ್ಲ.

### ಆ ಸಾಧಕ ನೀರಜ್ ಚೋಪ್ರಾ

ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಎಸೆತ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ನೀರಜ್ ಈ ಸಲದ ಕ್ರೀಡಾಪ್ರೇಮಿಗಳ ಕುಂಭಮೇಳದಲ್ಲಿ ಸಂಭ್ರಮ









